# ಜಾರಿಬಿದ್ದ ಜಾಣ!

■ ಪ್ರವೀಣ ಕುಲಕರ್ಣಿ

'ಕೀಲೆಣ್ಣೆ ಸವರಿಕೊಂಡ ಹಂದಿಮರಿ (greased piglet)' – ಇದು ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಅವರಿಗೆ ಅಂಟಿಕೊಂಡ ವಿಶೇಷಣ. ಬಾರಿ ಬಾರಿ ವಿವಾದಗಳು, ಹಗರಣಗಳ ಸುಳಿಯಲ್ಲಿ ಸಿಕ್ಕಿಬಿದ್ದರೂ ಅವುಗಳಿಂದ ಜಾರಿಕೊಂಡು ಮುನ್ನುಗ್ಗುವ ತಂತ್ರಗಾರಿಕೆಯಿಂದ ಅವರು ಪಡೆದ ವಿಶೇಷಣ ಇದಾಗಿದೆ. ಆದರೆ, ಸವರಿಕೊಂಡ ಎಣ್ಣೆ ಸಾಲದಾಯಿತೋ ಏನೋ ಈ ಬಾರಿ, ಜಾನ್ಸನ್ ಹಗರಣಗಳ ಕೆಸರಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಅದರ ಫಲವಾಗಿ ಕನ್ಸರ್‌ವೇಟಿವ್ ಪಕ್ಷದ ನಾಯಕತ್ವ ಹುದ್ದೆಗೂ ರಾಜೀನಾಮೆ ನೀಡಿದ್ದಾರೆ. ಆಡಳಿತ ಪಕ್ಷವಾದ ಕನ್ಸರ್‌ವೇಟಿವ್‌ನ ನಾಯಕತ್ವ ಹುದ್ದೆ ತೊರೆಯುವುದು ಎಂದರೆ ಪ್ರಧಾನಿ ಹುದ್ದೆಯಿಂದ ನಿರ್ಗಮನ ಎಂದೇ ಅರ್ಥ. ಆ ಮಹಾ ನಿರ್ಗಮನದ ಔಪಚಾರಿಕ ಪ್ರಕ್ರಿಯೆಗಳಿಗೆ ಅಕ್ಟೋಬರ್‌ವರೆಗೆ ಕಾಲಾವಕಾಶ ಬೇಕಿದೆ ಅಷ್ಟೆ.

ಬೋರಿಸ್, ಕನ್ಸರ್‌ವೇಟಿವ್‌ನ ನಾಯಕತ್ವ ವಹಿಸಿಕೊಂಡು ಹೆಚ್ಚು ಸಮಯವೇನೂ ಆಗಿರಲಿಲ್ಲ. ತೆರೆಸಾ ಮೇ ಅವರಿಂದ ಅಧಿಕಾರ ಪಡೆದು ಈಗಷ್ಟೇ ಮೂರು ವರ್ಷಗಳಾಗಿವೆ. ಕನ್ಸರ್‌ವೇಟಿವ್ ಪಕ್ಷವು ಬೋರಿಸ್ ನೇತೃತ್ವದಲ್ಲಿಯೇ ಕಳೆದ ಬಾರಿ ಚುನಾವಣೆ ಎದುರಿಸಿತ್ತು. ಭಾರೀ ಬಹುಮತದೊಂದಿಗೆ ಅವರು ಪ್ರಧಾನಿ ಹುದ್ದೆಗೇರಿದ್ದರು. 2020ರ ಜನವರಿಯಲ್ಲಿ ಯುರೋಪ್ ಒಕ್ಕೂಟದಿಂದ ಇಂಗ್ಲೆಂಡ್ ಸಂಪೂರ್ಣವಾಗಿ ಹೊರಬರಲು ಕಾರಣರಾದ ಅವರು, ಕೋವಿಡ್ ಸನ್ನಿವೇಶದ ನಿರ್ವಹಣೆ ಮಾಡಿದ ರೀತಿಗೆ ತೀವ್ರ ಟೀಕೆಗೆ ಗುರಿಯಾಗಿದ್ದರು. ಅವರ ಸರ್ಕಾರದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕಳಪೆ ಕಾಮಗಾರಿಯದೇ ರಾಜ್ಯಭಾರ ಎಂಬ ಆಪಾದನೆಯನ್ನೂ ಎದುರಿಸಬೇಕಾಯಿತು.

ಬೋರಿಸ್ ಅವರ ವಿಕ್ಷಿಪ್ತ ಆಡಳಿತ ಶೈಲಿಗೂ ಅವರ ಅಸ್ತವ್ಯಸ್ತ ಖಾಸಗಿ ಬದುಕಿಗೂ ಸಂಬಂಧವಿದೆ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಿದ್ದರು. ಮೂರು ವಿವಾಹಗಳನ್ನು ಆಗಿರುವ ಅವರಿಗೆ ಕನಿಷ್ಠ ಏಳು ಮಕ್ಕಳು ಇದ್ದಾರೆ ಎಂಬುದು ಬಲ್ಲ ಮೂಲಗಳು ಬಿಟ್ಟುಕೊಡುವ ಮಾಹಿತಿ. ಅಂದಹಾಗೆ, ಬೋರಿಸ್ ರಾಜಕಾರಣಿಯಾಗಿ ಗುರ್ತಿಸಿಕೊಳ್ಳುವ ಮುನ್ನ ಪತ್ರಕರ್ತರಾಗಿದ್ದವರು. 'ಅವರಿಗೆ ಹತ್ತಿರವಾದಷ್ಟೂ ಅವರಿಂದ ನೀವು ದೂರವಾಗುತ್ತಲೇ ಹೋಗುತ್ತೀರಿ. ಅವರ ಮೇಲಿನ ನಂಬಿಕೆ ಕೂಡ ಕಡಿಮೆಯಾಗುತ್ತ ಹೋಗುತ್ತದೆ. ನಿಮ್ಮನ್ನು ಅವರು ದಿಕ್ಕು ತಪ್ಪಿಸುತ್ತಾರೆ ಇಲ್ಲವೆ ಮುಳುಗಿಸಿಬಿಡುತ್ತಾರೆ' ಎಂದು ಡೇಲಿ ಟೆಲಿಗ್ರಾಫ್‌ನಲ್ಲಿ ಅವರ ಸಹೋದ್ಯೋಗಿಯಾಗಿದ್ದ ಸೋನಿಯಾ ಪುರ್ನೆಲ್ ಹೇಳುತ್ತಾರೆ.

ಕಾಲೇಜು ದಿನಗಳಿಂದಲೂ ಬೋರಿಸ್ ತುಂಬಾ ಒರಟಾಗಿದ್ದರು ಎಂಬುದಕ್ಕೆ ಅವರ ಕುರಿತ ಹಲವು 'ಕಥೆ'ಗಳು ಸಾಕ್ಷಿಯಾಗಿವೆ. ಸಹಾಯಾರ್ಥ ಫುಟ್‌ಬಾಲ್ ಪಂದ್ಯವೊಂದರಲ್ಲಿ ಅವರು ಎದುರಾಳಿಗಳ ಮೇಲೆ ದಾಳಿ ಮಾಡಿದ್ದ ಉದಾಹರಣೆಯನ್ನೂ ಅವರ ಶಿಕ್ಷಕರು ನೀಡುತ್ತಾರೆ. ಆಕ್ಸ್‌ಫರ್ಡ್ ಒಕ್ಕೂಟದ ಅಧ್ಯಕ್ಷರಾಗಿದ್ದಾಗ ಸತ್ಯಸಂಗತಿಗಳನ್ನು ಮರೆಮಾಚಿದ್ದ ಆರೋಪವೂ ಅವರ ಮೇಲಿದೆ. ವಿದ್ಯಾರ್ಥಿ ಜೀವನದ ರಾಜಕೀಯದಲ್ಲಿ ಅವರ ಬೆನ್ನಿಗೆ ಚೂರಿ ಹಾಕುವ ಸ್ವಭಾವ ಹಲವು ಸ್ನೇಹಿತರನ್ನು ಅವರಿಂದ ದೂರ ಸರಿಯುವಂತೆ ಮಾಡಿತು ಎನ್ನುವ ಸಂಗತಿಯೂ ಕ್ಯಾಂಪಸ್ ಅಂಗಳದಲ್ಲಿ ಕೇಳಿಬರುತ್ತದೆ. 'ದಿ ಟೈಮ್ಸ್' ಪತ್ರಿಕೆಯಲ್ಲಿದ್ದ ಅವರು, ಹೇಳಿಕೆಯನ್ನು ತಿರುಚಿ ಬರೆದ ತಪ್ಪಿಗಾಗಿ ಕೆಲಸ ಕಳೆದುಕೊಂಡಿದ್ದರು. ಅಲ್ಲಿಂದ ಟೆಲಿಗ್ರಾಫ್ ಪತ್ರಿಕೆ ಸೇರಿ ಬ್ರಸೆಲ್ಸ್‌ನಲ್ಲಿ ವರದಿಗಾರನಾಗಿದ್ದರು.

ಟಿ.ವಿ.ಯಲ್ಲಿ ಬರುತ್ತಿದ್ದ ವಿಡಂಬನಾತ್ಮಕ ರಸಪ್ರಶ್ನೆ ಸ್ಪರ್ಧೆಗಳ ನಿರೂಪಣೆ, ಪತ್ರಿಕೆ ಮತ್ತು ನಿಯತಕಾಲಿಕದಲ್ಲಿ ಬರುತ್ತಿದ್ದ ಅಂಕಣಗಳನ್ನು ಏಣಿ ಮಾಡಿಕೊಂಡು ಬೋರಿಸ್ ತಮ್ಮ ಪ್ರಭಾವವನ್ನು ಬೆಳೆಸಿಕೊಳ್ಳುತ್ತಲೇ ಮುನ್ನುಗ್ಗಿದರು. ಒಂಟಿ ತಾಯಂದಿರು ಮತ್ತು ಸಲಿಂಗಕಾಮಿಗಳ ಸುತ್ತಲೇ ಅವರ ಬಹುತೇಕ ಅಂಕಣಗಳು ಗಿರಕಿ ಹೊಡೆದಿದ್ದವು. 2004ರಲ್ಲಿ ಅವರು ಮೊದಲ ಬಾರಿಗೆ ಸಂಸದನಾಗಿ ಆಯ್ಕೆಯಾದರು. ಆಗ ಕನ್ಸರ್‌ವೇಟಿವ್‌ನ ನಾಯಕರಾಗಿದ್ದ ಮೈಕೆಲ್ ಹೋವಾರ್ಡ್‌ಗೆ ಆಪ್ತರಾಗಿದ್ದರು. ಆದರೆ, ಬೋರಿಸ್ ಅವರ ವಿವಾಹೇತರ ಸಂಬಂಧದ ಕುರಿತು ಹೋವಾರ್ಡ್‌ಗೆ ಮಾಹಿತಿ ಸಿಗುತ್ತಿದ್ದಂತೆ, ಅವರನ್ನು ದೂರ ಅಟ್ಟಿದ್ದರು. 2008ರಿಂದ 2016ರ ಅವಧಿಯಲ್ಲಿ ಲಂಡನ್ ಮೇಯರ್ ಆಗಿದ್ದರು. ಆ ಅವಧಿಯಲ್ಲಿ ಇಂಗ್ಲೆಂಡ್, ಯೂರೋಪ್ ಒಕ್ಕೂಟದಲ್ಲಿಯೇ ಇರಬೇಕು ಎಂದು ಹೇಳುತ್ತಿದ್ದ ಬೋರಿಸ್, ಈ ಸಂಬಂಧ ಜನಾಭಿಪ್ರಾಯ ತಿಳಿದ ಮೇಲೆ (ಬ್ರೆಕ್ಸಿಟ್) ತಮ್ಮ ನಿಲುವನ್ನೂ ಬದಲಿಸಿಕೊಂಡಿದ್ದರು.

ಬೋರಿಸ್ ಸರ್ಕಾರದ ಅವಧಿಯಲ್ಲಿ ಹಗರಣಗಳ ಮೇಲೆ ಹಗರಣಗಳು ನಡೆದಿವೆ. ಇಬ್ಬರು ಪುರುಷರ ಜತೆ ಲೈಂಗಿಕವಾಗಿ ಅಸಭ್ಯವಾಗಿ ವರ್ತಿಸಿದ್ದ ಸಂಸದ ಕ್ರಿಸ್ಟೋಫರ್ ಪಿಂಚರ್ ಅವರನ್ನು ಕನ್ಸರ್‌ವೇಟಿವ್ ಪಕ್ಷದ ಉಪ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಿ ಅವರು ವಿವಾದಕ್ಕೆ ಒಳಗಾಗಿದ್ದರು. 'ಪಿಂಚರ್ ಮೇಲಿದ್ದ ಆರೋಪದ ಕುರಿತು ಗೊತ್ತಿರಲಿಲ್ಲ' ಎಂದಿದ್ದ ಬೋರಿಸ್, ಬಳಿಕ 'ಆ ವಿಷಯ ಮೊದಲೇ ಗೊತ್ತಿತ್ತು' ಎಂದು ತಪ್ಪೊಪ್ಪಿಕೊಂಡಿದ್ದರು. 2020ರ ಜೂನ್‌ನಲ್ಲಿ ಬ್ರಿಟನ್‌ನಲ್ಲಿ ಕೋವಿಡ್ ಲಾಕ್‌ಡೌನ್ ಜಾರಿಯಲ್ಲಿತ್ತು. ತಮ್ಮ ಜನ್ಮದಿನ ಪ್ರಯುಕ್ತ ಡೌನಿಂಗ್ ಸ್ಟ್ರೀಟ್ ಗಾರ್ಡನ್‌ನಲ್ಲಿ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿ ಬೋರಿಸ್ ಪಾರ್ಟಿ ಆಯೋಜಿಸಿದ್ದರು. ಮೊದಲು ಪಾರ್ಟಿಯನ್ನೇ ಆಯೋಜಿಸಿಲ್ಲ ಎಂದಿದ್ದ ಅವರು, ವಿವಾದ ಭುಗಿಲೇಳುತ್ತಿದ್ದಂತೆ ಉಲ್ಟಾ ಹೊಡೆದು ದೇಶದ ಕ್ಷಮೆಯಾಚಿಸಿದ್ದರು. ಪಕ್ಷದ ಸಂಸದರ ಲೈಂಗಿಕ ಹಗರಣಗಳು ಸಹ ಅವರನ್ನು ಮಗ್ಗಲು ಮುಳ್ಳಾಗಿ ಚುಚ್ಚಿದವು.

ಕಾನೂನು ಉಲ್ಲಂಘಿಸಿದ ಒವೆನ್ ಪಾರ್ಟರ್‌ಸನ್ ಅವರ ಶಿಸ್ತುಕ್ರಮ ಕೈಗೊಳ್ಳುವ ಶಿಫಾರಸಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದರು ಬೋರಿಸ್. ಇದರಿಂದ, ಜಾನ್ಸನ್ ಮತ್ತು ಅವರ ಸರ್ಕಾರವು ಭ್ರಷ್ಟರನ್ನು ಬೆಂಬಲಿಸುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಹೀಗೆ ವಿವಾದಗಳನ್ನು ಮೈಮೇಲೆ ಎಳೆದುಕೊಂಡ ಬೋರಿಸ್, ಅವುಗಳ ಭಾರ ತಾಳಲಾಗದೆ ಸ್ವತಃ ಕುಸಿದಿದ್ದಾರೆ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65